

ಎಸ್. ದಿವಾಕರ್

ಕಲೆ: ವಿಶ್ವನಾಥ ಎ.ಎಸ್.

# ಧೂಳೀಪಟ

ನಾನು ರಾತ್ರಿ ಒಂಬತ್ತು ಗಂಟೆಯ ಸುಮಾರಿಗೆ ಅಂಥ ಗೊತ್ತುಗುರಿಯೇನೂ ಇಲ್ಲದೆ ಆ ಬೀದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಹಠಾತ್ತಾಗಿ ದೀಪಗಳು ಆರಿಹೋದವು. ಸಾಕಷ್ಟು ಇಕ್ಕಟ್ಟಾಗಿದ್ದ ಬೀದಿಯಲ್ಲಿ ದಾರಿ ತಪ್ಪಿದವನ ಹಾಗೆ ಒಂದು ಕ್ಷಣ ತಬ್ಬಿಬ್ಬಾಗಿ ನಿಂತೆ. ಅರೆಗತ್ತಲಿದ್ದ ಸಣ್ಣಪುಟ್ಟ ಅಂಗಡಿಗಳಲ್ಲಿ ಜನವೂ ಅಷ್ಟಾಗಿರಲಿಲ್ಲ. ಯಾಕೋ ಏನೋ, ಹಿಂದೆ ತಿರುಗಿ ನೋಡಬೇಕೆನ್ನಿಸಿತು. ನನ್ನನ್ನು ಹಿಂಬಾಲಿಸಿಕೊಂಡೇ ಬಂದನೇನೋ ಎನ್ನಿಸುವಂತೆ ಕಾಣಿಸಿಕೊಂಡ ಒಬ್ಬ ನನ್ನನ್ನು ಅನುಸರಿಸಿಕೊಂಡೇ ಬೇಗ ಬೇಗ ಬಂದು ನನ್ನ ಸಮಸಮಕ್ಕೆ ನಡೆಯತೊಡಗಿದ. ನನಗೆ ತುಸು ಹೆದರಿಕೆಯಾದರೂ ಎರಡು ಮೂರು ಸಲ ಅವನನ್ನು ನೋಡಿದ ಮೇಲೆ ಆ ಮೊದಲು ಎಲ್ಲೋ ನೋಡಿದ ಹಾಗಿದೆಯಲ್ಲ ಎನ್ನಿಸಿ, ಎಲ್ಲಿ ಎಂದು ಹೊಳೆಯದೆ ಯೋಚನೆಗಿಟ್ಟುಕೊಂಡಿತು. ಸುಮಾರು ಎರಡು ಫರ್ಲಾಂಗು ದೂರ ಹೋದ ಮೇಲೆ, ಇವರು ಒಂದಾನೊಂದು ಕಾಲದ ಸಿನಿಮಾ ನಿರ್ದೇಶಕ ಧನಂಜಯ ಅಲ್ಲವೇ ಎನ್ನಿಸಿ ಅವಾಕ್ಕಾದೆ. ಇಬ್ಬರೂ ನಾಲ್ಕು ಹೆಜ್ಜೆ ಹಾಕಿದ್ದೆವೋ ಇಲ್ಲವೋ ಅವರು, ಯಾರೋ ಕರೆದರೇನೂ ಎನ್ನುವಂತೆ, ಬಲಗಡೆಗೆ ನೋಡುತ್ತ ನಿಂತುಬಿಟ್ಟರು. ತುಂಬಾ ಹಳೆಯದಾದೊಂದು ಕಟ್ಟಡದ ಮೇಲಂತಸ್ತಿನಲ್ಲಿ ದೊಡ್ಡದೊಡ್ಡ ಅಕ್ಷರಗಳಲ್ಲಿದ್ದ ಬಾಂಬೆ ಬಯಾಸ್ಕೋಪ್ ಎಂಬ ಹೆಸರು ನೋಡಿ ಧನಂಜಯರಿಗಿಂತ ನನಗೇ ಹೆಚ್ಚು ಆಶ್ಚರ್ಯವಾಯಿತೆನ್ನಬೇಕು. ಆ ಕಟ್ಟಡಕ್ಕೆ ಅಂಟಿಕೊಂಡೇ ಇದ್ದ ದೊಡ್ಡದೊಂದು ಹುಣಸೇ ಮರದಲ್ಲಿ ನಾಲ್ಕಾರು ಕಾಗೆಗಳು ಕೂಗಿಕೊಂಡು ಒಮ್ಮೆಗೇ ತೆಪ್ಪಗಾದವು.

ನಾವಿಬ್ಬರೂ ಹೆಜ್ಜೆಯಿಟ್ಟಂತೆಲ್ಲ ಕಿರ್ರೆನ್ನುತ್ತಿದ್ದ ಮರದ ಮೆಟ್ಟಿಲುಗಳನ್ನು ಹತ್ತತೊಡಗಿದೆವು. ನನಗೆ ನೆನಪಿರುವಂತೆ ಅಲ್ಲೆಲ್ಲೂ ಬೆಳಕಿರಲಿಲ್ಲ. ಎಷ್ಟು ಕಿರಿದಾದ ಮೆಟ್ಟಿಲುಗಳೆಂದರೆ ನಾವು ಒಬ್ಬರ ಹಿಂದೆ ಒಬ್ಬರು ಎಷ್ಟೇ ಹುಷಾರಾಗಿ ಹೆಜ್ಜೆಯಿಟ್ಟರೂ, ಒಮ್ಮೊಮ್ಮೆ ಕಟ್ಟಡದ ಗೋಡೆಗೆ ಮೈತಾಗಿ ನಮ್ಮ ಶರ್ಟು, ಪ್ಯಾಂಟುಗಳು ಕೊಳೆಯಾದದ್ದೂ ಉಂಟು. ಅಲ್ಲ, ಬೆಂಗಳೂರು ಕಂಟೋನ್ಮೆಂಟಿನ ಈ ಭಾಗದಲ್ಲಿ ಸಿನಿಮಾ ತೋರಿಸುವ ಥಿಯೇಟರು ಕಾಣಿಸಿಕೊಳ್ಳುವುದೆಂದರೆ! ನಾವು ಹಾಗೂ ಹೀಗೂ ಹತ್ತಿ ಮೇಲಿನೊಂದು ಹಾಲಿಗೆ ಹೋದಾಗ ತುಂಬಾ ಚಳಿಯೇನೋ ಎನ್ನುವಂತೆ ಹಳೆಯದೊಂದು ಕೋಟು ತೊಟ್ಟುಕೊಂಡ, ಉದ್ದ ಮೂಗಿನ, ಬಿರುಗೂದಲಿನ ಮುದುಕನೊಬ್ಬ ಏನು ಬೇಕಾಗಿತ್ತು ಎನ್ನುತ್ತಾ ನಮ್ಮ ಬಳಿಗೆ ಬಂದ. ನೋಡಿದರೆ ಈ ಕಾಲದವನಂತೂ ಅಲ್ಲವೇ ಅಲ್ಲ ಎನ್ನಿಸುವಂತಿದ್ದ ಅವನು ನಮ್ಮಿಬ್ಬರಿಂದ ಒಂದೊಂದು ರೂಪಾಯಿ ತೆಗೆದುಕೊಂಡು 'ಹೋಗಿ ಒಳಗೆ' ಎಂದವನೇ ಕೊಳೆಕೊಳೆಯಾದ ಒಂದು ಕಪ್ಪು ಕರ್ಟನ್ನನ್ನು ಬದಿಗೆ